# ಮಗು ಜನಿಸಿದರೆ ~ من رزق له الولد

ಪರಮದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಲ್ಲಿ

**ಮಗು** ಜನಿಸುವುದು ಪ್ರತಿಯೊಂದು ದಂಪತಿಗಳ ಅಭಿಲಾಷೆಯಾಗಿದೆ. ಮಕ್ಕಳು ಅಲ್ಲಾಹನ ಅಪಾರ ಅನುಗ್ರಹಗಳಲ್ಲೊಂದಾಗಿದ್ದಾರೆ. ವಿವಾಹಿತರಾಗಿ ಅನೇಕ ವರ್ಷಗಳ ವರೆಗೂ ಒಂದು ಮಗುವನ್ನು ಕಾಣಲು ಸೌಭಾಗ್ಯ ಲಭಿಸದವರ ಮಾನಸಿಕ ಪ್ರಯಾಸವು ವರ್ಣಾತೀತವಾಗಿದೆ. ವೃದ್ಧಾಪ್ಯದ ವರೆಗೂ ಸಂತಾನ ಸೌಭಾಗ್ಯ ಲಭಿಸದ ಇಬ್ರಾಹೀಂ(ﷺ) ಮತ್ತು ಝಕರಿಯ್ಯಾ(ﷺ)ರವರ ಪ್ರಾರ್ಥನೆಯನ್ನು ಖುರ್‌ಆನ್ ನಮಗೆ ವಿವರಿಸಿ ಕೊಟ್ಟಿದೆ. ಶೈಶವದಲ್ಲಿ ಆನಂದವೂ ಯೌವ್ವನದಲ್ಲಿ ಆಶ್ವಾಸನೆಯೂ ವಾರ್ಧಕ್ಯದಲ್ಲಿ ಆಶ್ರಯವು ನೀಡಬೇಕಾದವರೇ ಮಕ್ಕಳು. ಮಮತೆಯುಳ್ಳವರೂ, ಅನುಸರಣೆಯುಳ್ಳವರೂ ಆದ ಮಕ್ಕಳು ಮಾತಾ-ಪಿತರಿಗೆ ಎಂದೂ ಕಣ್ತಣಿಸುವವರಾಗಿದ್ದಾರೆ. ಮಕ್ಕಳ ಮೂಲಕ ಕಣ್ಮನ ತಣಿಸಲಿಕ್ಕಾಗಿ ಪ್ರಾರ್ಥಿಸುವ ಅಲ್ಲಾಹನ ದಾಸರ ಬಗ್ಗೆ ಪವಿತ್ರ ಖುರ್‌ಆನ್ ಹೇಳುತ್ತದೆ:

﴿وَالَّذِينَ يَقُولُونَ رَبَّنَا هَبْ لَنَا مِنْ أَزْوَاجِنَا وَذُرِّيَّاتِنَا قُرَّةَ أَعْيُنٍ وَاجْعَلْنَا لِلْمُتَّقِينَ إِمَامًا﴾ -الفرقان

**"ಅವರು, 'ನಮ್ಮ ಪ್ರಭೂ! ನಮ್ಮ ಪತ್ನಿಯರಲ್ಲಿ ಮತ್ತು ನಮ್ಮ ಸಂತಾನಗಳಲ್ಲಿ ನೀನು ನಮಗೆ ಕಣ್ಮನ ತಣಿಸುವಿಕೆಯನ್ನು ದಯಪಾಲಿಸು ಮತ್ತು ಭಯಭಕ್ತಿ ಪಾಲಿಸುವವರಿಗೆ ನಮ್ಮನ್ನು ಮಾದರಿಯಾಗಿ ಮಾಡು' ಎಂದು ಪ್ರಾರ್ಥಿಸುವವರಾಗಿರುವರು."(ಅಲ್ ಫುರ್‌ಖಾನ್ 25/74)**

ಮಕ್ಕಳು ಭೌತಿಕ ಜೀವನದ ಅಲಂಕಾರಗಳಾಗಿದ್ದಾರೆ ಎಂದು ಅಲ್ಲಾಹನು ಹೇಳುತ್ತಾನೆ:

﴿الْمَالُ وَالْبَنُونَ زِينَةُ الْحَيَاةِ الدُّنْيَا وَالْبَاقِيَاتُ الصَّالِحَاتُ خَيْرٌ عِنْدَ رَبِّكَ ثَوَابًا وَخَيْرٌ أَمَلًا﴾ -الكهف

**"ಸಂಪತ್ತು ಮತ್ತು ಸಂತಾನಗಳು ಐಹಿಕ ಜೀವನದ ಅಲಂಕಾರಗಳಾಗಿವೆ. ಆದರೆ ನೆಲೆನಿಲ್ಲುವ ಸತ್ಕರ್ಮಗಳು, ತಮ್ಮ ಪ್ರಭುವಿನ ಬಳಿ ಅತ್ಯುತ್ತಮವಾದ ಪ್ರತಿಫಲವನ್ನು ನೀಡುವಂತದ್ದೂ ಅತ್ಯುತ್ತಮವಾದ ನಿರೀಕ್ಷೆಯನ್ನು ತರುವಂತದ್ದೂ ಆಗಿವೆ."(ಅಲ್ ಕಹ್ಫ್ 18/46)**

ಸಂತಾನಗಳು, ನೀಚ ಕೃತ್ಯದ ವಾಹಕರೂ ಆಜ್ಞೋಲ್ಲಂಘನೆಯ ಪ್ರತೀಕವೂ ದೈವಿಕ ಆಜ್ಞೆಗಳ ಧಿಕ್ಕಾರಿಗಳೂ ಆಗಿ ಬಿಟ್ಟರೆ ಮಾತಾ-ಪಿತರಿಗೆ ಅದೊಂದು ಪರೀಕ್ಷೆಯು ಪ್ರಯಾಸಕರವು ಆಗಿದೆ. ಅಲ್ಲಾಹನು ನುಡಿಯುತ್ತಾನೆ:

﴿لِلَّهِ مُلْكُ السَّمَاوَاتِ وَالْأَرْضِ يَخْلُقُ مَا يَشَاءُ يَهَبُ لِمَنْ يَشَاءُ إِنَاثًا وَيَهَبُ لِمَنْ يَشَاءُ الذُّكُورَ (49) أَوْ يُزَوِّجُهُمْ ذُكْرَانًا وَإِنَاثًا وَيَجْعَلُ مَنْ يَشَاءُ عَقِيمًا إِنَّهُ عَلِيمٌ قَدِيرٌ﴾ -الشورى

**"ಆಕಾಶಗಳ ಮತ್ತು ಭೂಮಿಯ ಆಧಿಪತ್ಯವು ಅಲ್ಲಾಹುವಿಗಾಗಿದೆ. ಅವನು ತಾನಿಚ್ಛಿಸುವುದನ್ನು ಸೃಷ್ಟಿಸುವನು. ಅವನು ತಾನಿಚ್ಛಿಸುವವರಿಗೆ ಹೆಣ್ಣು ಮಕ್ಕಳನ್ನು ಕರುಣಿಸುವನು. ಅವನು ತಾನಿಚ್ಛಿಸುವವರಿಗೆ ಗಂಡು ಮಕ್ಕಳನ್ನು ಕರುಣಿಸುವನು. ಅಥವಾ ಅವನು ಅವರಿಗೆ ಗಂಡು ಮತ್ತು ಹೆಣ್ಣು ಮಕ್ಕಳನ್ನು ಜೊತೆಯಾಗಿ ಕರುಣಿಸುವನು. ಅವನು ತಾನಿಚ್ಛಿಸುವವರನ್ನು ಬಂಜೆಯನ್ನಾಗಿ ಮಾಡುವನು. ಖಂಡಿತವಾಗಿಯೂ ಅವನು ಸರ್ವಜ್ಞನೂ, ಸರ್ವಶಕ್ತನೂ ಆಗಿರುವನು."(ಅಶ್ಶೂರಾ 42/49,50)**

ಹೆಣ್ಣು ಮಕ್ಕಳನ್ನು ಅಸಹ್ಯವಾಗಿ ಕಾಣುವುದು ಜಾಹಿಲಿಯ್ಯಾ ಸಂಪ್ರದಾಯವಾಗಿದೆ. ಅಲ್ಲಾಹನು ಹೇಳುತ್ತಾನೆ:

﴿وَإِذَا بُشِّرَ أَحَدُهُمْ بِالْأُنْثَى ظَلَّ وَجْهُهُ مُسْوَدًّا وَهُوَ كَظِيمٌ (58) يَتَوَارَى مِنَ الْقَوْمِ مِنْ سُوءِ مَا بُشِّرَ بِهِ أَيُمْسِكُهُ عَلَى هُونٍ أَمْ يَدُسُّهُ فِي التُّرَابِ أَلَا سَاءَ مَا يَحْكُمُونَ﴾ -النحل

**"ಅವರ ಪೈಕಿ ಒಬ್ಬನಿಗೆ ಹೆಣ್ಣು ಮಗು ಜನಿಸಿದ ಶುಭ ವಾರ್ತೆಯನ್ನು ತಿಳಿಸಲಾದರೆ ರೋಷಾಕುಲನಾಗಿರುತ್ತಾ ಅವನ ಮುಖವು ಕಠ್ರಗಾಗುವುದು. ತನಗೆ ತಿಳಿಸಲಾಗಿರುವ ಆ ಶುಭವಾರ್ತೆಯ ಅಪಮಾನದಿಂದಾಗಿ ಅವನು ಜನರಿಂದ ಅಡಗಿಕೊಳ್ಳುವನು. ಅಪಮಾನದಿಂದಾಗಿ ಅದನ್ನು ಉಳಿಸಬೇಕೋ ಅಥವಾ ಅದನ್ನು ಮಣ್ಣಿನಲ್ಲಿ ಹೂಳಬೇಕೋ (ಎಂದಾಗಿರುವುದು ಅವನ ಆಲೋಚನೆ!). ಅರಿತು ಕೊಳ್ಳಿರಿ! ಅವರು ಕೈಗೊಳ್ಳುವ ತೀರ್ಮಾನವು ಎಷ್ಟು ನಿಕೃಷ್ಟವಾದುದು!"(ಅನ್ನಹ್ಲ್ 16/58,59)**

ಆದರೆ ಇಸ್ಲಾಮ್ ಹೆಣ್ಣು ಮಕ್ಕಳಿಗೆ ಅರ್ಹವಾದ ಸ್ಥಾನ–ಮಾನವನ್ನು ಕಲ್ಪಿಸಿದೆ ಮತ್ತು ಅವರು ಮಾತಾ–ಪಿತರ ಸ್ವರ್ಗ ಪ್ರವೇಶಕ್ಕೆ ಕಾರಣರಾಗುವರು ಎಂದಿದೆ. ಪ್ರವಾದಿ(ﷺ)ರವರು ಹೀಗೆನ್ನುತ್ತಾರೆ:

«مَنْ عَالَ جَارِيَتَيْنِ حَتَّى تَبْلُغَا جَاءَ يَوْمَ الْقِيَامَةِ أَنَا وَهُوَ. وَضَمَّ أَصَابِعَهُ.» – مسلم

**"ಎರಡು ಹೆಣ್ಣು ಮಕ್ಕಳನ್ನು, ಅವರು ಪೌಢ(ಪ್ರಜ್ಞೆ)ರಾಗುವ ವರೆಗೆ ಯಾರಾದರೂ ಪರಿಪಾಲನೆ ಮತ್ತು ಆರೈಕೆ ಮಾಡಿದರೆ ಅಂತ್ಯದಿನದಂದು ನಾನೂ ಅವನೂ (ಹೀಗೆ) ಬರುವೆವು ಎನ್ನುತ್ತಾ ಪ್ರವಾದಿ(ﷺ)ರವರು ಬೆರಳುಗಳನ್ನು ಪರಸ್ಪರ ಜೋಡಿಸಿಟ್ಟರು."(ಮುಸ್ಲಿಂ)**

«...مَنِ ابْتُلِيَ مِنْ هَذِهِ الْبَنَاتِ بِشَيْءٍ فَأَحْسَنَ إِلَيْهِنَّ كُنَّ سِتْرًا لَهُ مِنَ النَّارِ» – أحمد

**"...ಈ ಹೆಣ್ಣು ಮಕ್ಕಳ ಮೂಲಕ ಯಾರಾದರೂ ಪರೀಕ್ಷಿಸಲ್ಪಟ್ಟು ಅವನು ಅವರೊಂದಿಗೆ ಒಳಿತಿನಲ್ಲಿ ವರ್ತಿಸಿದರೆ ಅವರು ಅವನಿಗೆ ನರಕದೆಡೆಗೆ ಒಂದು ಮರೆಯಾಗುವರು"(ಅಹ್ಮದ್)**

ಹೆಣ್ಣು ಮಗು ಜನಿಸಿದೊಡನೆ ಮನಃಪ್ರಯಾಸಕ್ಕೀಡಾಗುವುದು ಮತ್ತು ಅವನ ಮುಖವು ಕಪ್ಪಗಾಗುವುದು ಈಮಾನಿನ ಕೊರತೆ ಮತ್ತು ಅಲ್ಲಾಹನ ಖಝಾ–ಖದ್ರ್‌ನ ಮೇಲಿರುವ ವಿಶ್ವಾಸವನ್ನು ಪ್ರಶ್ನಿಸುವುದೂ ಆಗಿದೆ. ಸದ್ಭಕ್ತರಾದ ಮಕ್ಕಳಿಂದ ಮಾತಾ–ಪಿತರಿಗೆ ಭೌತಿಕ ಜೀವನದಲ್ಲೂ ಪರಲೋಕ ಜೀವನದಲ್ಲೂ ಆಶ್ರಯ ಲಭಿಸುವುದು. ಪ್ರವಾದಿ(ﷺ)ರವರು ಹೇಳಿದರು:

«إِذَا مَاتَ الإِنْسَانُ انْقَطَعَ عَنْهُ عَمَلُهُ إِلاَّ مِنْ ثَلاَثَةٍ إِلاَّ مِنْ صَدَقَةٍ جَارِيَةٍ أَوْ عِلْمٍ يُنْتَفَعُ بِهِ أَوْ وَلَدٍ صَالِحٍ يَدْعُو لَهُ » – مسلم

**"ಒಬ್ಬನು ಮರಣ ಹೊಂದಿದರೆ ಆತನ ಮೂರು ಕರ್ಮಗಳ ಹೊರತು ಇನ್ನಿತರ ಕರ್ಮಗಳೆಲ್ಲವೂ ಆತನಿಂದ ಮುರಿದು ಹೋಗುವುದು. ಮುಂದುರಿಯುತ್ತಿರುವ ಸ್ವದಖಃ(ಸ್ವದಖತುನ್ ಜಾರಿಯ), ಉಪಕಾರಪ್ರದವಾದ ಜ್ಞಾನ, ಅವನಿಗಾಗಿ ಪ್ರಾರ್ಥಿಸುವ ಸದ್ಭಕ್ತರಾದ ಮಕ್ಕಳು"(ಮುಸ್ಲಿಂ)**

ಪ್ರವಾದಿ(ﷺ)ರವರು ನುಡಿದರು:

«إِنَّ اللَّهَ عَزَّ وَجَلَّ لَيَرْفَعُ الدَّرَجَةَ لِلْعَبْدِ الصَّالِحِ فِي الْجَنَّةِ ، فَيَقُولُ : يَا رَبِّ ، أَنَّى لِي هَذِهِ ؟ فَيَقُولُ : بِاسْتِغْفَارِ وَلَدِكَ لَكَ» – أحمد وحسنه الألباني

**"ಅಲ್ಲಾಹನು, ಸದ್ಭಕ್ತನಾದ ಓರ್ವ ದಾಸನಿಗೆ ಅವನ ಸ್ವರ್ಗದ ಪದವಿಯನ್ನು ಉನ್ನತಿಗೇರಿಸುತ್ತಾನೆ. ಆಗ ಆ ದಾಸನು 'ನನಗೆ ಇದು ಲಭಿಸಲು ಕಾರಣವೇನು'? ಎಂದು ಅಲ್ಲಾಹನಲ್ಲಿ ಕೇಳುವನು. ಆಗ ಅಲ್ಲಾಹನು "ನಿನಗಾಗಿ ನಿನ್ನ ಮಕ್ಕಳು ಇಸ್ತಿಗ್ಫಾರನ್ನು (ಪಾಪ ವಿಮೋಚನೆಯನ್ನು) ಕೇಳಿರುವುದರಿಂದ ಇದು ಲಭಿಸದೆ" ಎನ್ನುವನು (ಅಹ್ಮದ್)**

## ಮಗು ಜನಿಸಿದರೆ ಪಾಲಿಸಬೇಕಾದ ಕೆಲವು ವಿಧಿಗಳು

1. ***ಮಗು ಜನಿಸಿದವರಿಗೆ ಶುಭ ವಾರ್ತೆಯನ್ನು ನೀಡುವುದು, ಅನುಮೋದಿಸುವುದು, ಪ್ರಾರ್ಥಿಸುವುದು.***

ಪ್ರವಾದಿ ಇಬ್ರಾಹೀಂ(ﷺ)ರವರಿಗೆ ಜನಿಸಲಿರುವ ಮಗುವಿನ ವಿಷಯದಲ್ಲಿ ಮಲಕುಗಳು ಶುಭವಾರ್ತೆಯನ್ನು ನೀಡಿದ್ದರು. ಖುರ್‌ಆನ್ ಹೇಳುತ್ತದೆ:

﴿فَأَوْجَسَ مِنْهُمْ خِيفَةً قَالُوا لَا تَخَفْ وَبَشَّرُوهُ بِغُلَامٍ عَلِيمٍ﴾

**"ಆಗ ಅವರ ಬಗ್ಗೆ ಇಬ್ರಾಹೀಮ್‌ರ ಮನಸ್ಸಿನಲ್ಲಿ ಭಯವುಂಟಾಯಿತು. ಅವರು ಹೇಳಿದರು: 'ತಾವು ಭಯಪಡದಿರಿ'. ಜ್ಞಾನಿಯಾದ ಒಂದು ಗಂಡು ಮಗುವಿನ ಕುರಿತು ಅವರು ಇಬ್ರಾಹೀಮ್‌ರಿಗೆ ಶುಭವಾರ್ತೆಯನ್ನು ತಿಳಿಸಿದರು."(ಅದ್ಧಾರಿಯಾತ್ 51/28)**

ಕಅ್‌ಬ್ ಇಬ್ನ್ ಮಾಲಿಕ್(ﷺ)ರವರ ಮತ್ತು ಅವರಿಬ್ಬರ ಸಂಗಾತಿಗಳ ತೌಬವನ್ನು ಅಲ್ಲಾಹನು ಸ್ವೀಕರಿಸಿದಾಗ ಅವರಿಗೆ ಶುಭವಾರ್ತೆ ನೀಡಲ್ಪಟ್ಟ ಘಟನೆಯನ್ನು ಇಮಾಮ್ ಬುಖಾರಿ ಮತ್ತು ಮುಸ್ಲಿಂ ವರದಿ ಮಾಡಿದ್ದಾರೆ. ಜೀವನದಲ್ಲಿ ಉಂಟಾಗುವ ಸಂತೋಷದ ಸಂದರ್ಭಗಳಲ್ಲಿ ಶುಭವಾರ್ತೆ ನೀಡುವುದಕ್ಕೆ ಅಡ್ಡಿಯಿಲ್ಲ ಎಂಬುವುದರೆಡೆಗೆ ಇದು ಸೂಚನೆ ನೀಡುತ್ತದೆ.

### ೨. ಅದಾನ್ ಮತ್ತು ಇಖಾಮತ್

ಜನಿಸಿದ ಮಗುವಿನ ಬಲ ಕಿವಿಗೆ ಅದಾನ್ ಮತ್ತು ಎಡ ಕಿವಿಗೆ ಇಕಾಮತ್ ಕರೆ ನೀಡುವ ಸಂಪ್ರದಾಯವಿದೆ. ಆದರೆ ಪ್ರಸ್ತುತಃ ವಿಷಯದ ಬಗ್ಗೆ ವರದಿಯಾದ ಹದೀಸ್ ದುರ್ಬಲ(ದಈಫ್) ಅಥವಾ ನಿರ್ಮಿತ(ಮೌಝೂಅ್) ಹದೀಸ್‌ಗಳಾಗಿವೆ.

ಶೈಖ್ ನಾಸಿರುದ್ದೀನ್ ಅಲ್ಬಾನಿ(ﷺ)ರವರ 'ಸಿಲ್‌ಸಿಲತು ಅಹಾದೀಸು ದಈಫ ವಲ್ ಮೌಝೂಅ' ಎಂಬ ಗ್ರಂಥದಲ್ಲಿ 6121 ನಂಬ್ರ ಹದೀಸ್‌ನಲ್ಲಿ ಅದನ್ನು ವಿವರಿಸಲಾಗಿದೆ.

### *3. ತಹ್‌ನೀಕ್(ಖರ್ಜೂರವನ್ನು ಬಾಯಿಯಿಂದ ಮೃದುಗೊಳಿಸಿ ಮಗುವಿನ ಬಾಯಿಗೆ ಹಾಕುವುದು)*

ಪ್ರವಾದಿ(ﷺ)ರವರ ಬಳಿಗೆ ಸ್ವಹಾಬಿಗಳು ಮಗುವನ್ನು ಕರೆತಂದು ಪ್ರವಾದಿ(ﷺ)ರವರು ಮಗುವಿನ ಬಾಯಿಗೆ ಸಿಹಿಯನ್ನು ಹಾಕುತ್ತಿದ್ದರು. ಇದು ಎರಡು ಉದ್ದೇಶದಿಂದಾಗಿರಬಹುದು.

ಒಂದು: ಪ್ರವಾದಿ(ﷺ)ರವರ ಉಗುಳಿಗಿರುವ ಬರ್ಕತ್‌ನ ಕಾರಣದಿಂದ ಸ್ವಹಾಬಿಗಳು ಮಗುವನ್ನು ಪ್ರವಾದಿ(ﷺ)ರವರ ಬಳಿಗೆ ತಂದಿರಬಹುದು.

ಎರಡು: ಮೊಟ್ಟಮೊದಲು ಮಗುವಿನ ಬಾಯಿಗೆ ಸಿಹಿ ಹಾಕಬೇಕು ಎಂಬ ಕಾರಣದಿಂದಲೂ ಆಗಿರಬಹುದು.

ಮೊದಲು ಹೇಳಿದ ಉದ್ದೇಶದಿಂದಾದರೆ ಅದು ಪ್ರವಾದಿ(ﷺ)ರವರಿಗೆ ಮಾತ್ರವಿರುವ ಪ್ರತ್ಯೇಕತೆಯಾಗಿದೆ. ಆದುದರಿಂದ ಬರ್ಕತನ್ನು ಉದ್ದೇಶಿಸಿ ಮಹಾತ್ಮರುಗಳೆಂದು ಹೇಳಲ್ಪಡುವವರ ಬಳಿಗೆ ಮಗುವನ್ನು ಕೊಂಡೊಯ್ದು ತಹ್‌ನೀಕ್ ಮಾಡಿಸಕೂಡದು. ಕಾರಣ ಪ್ರವಾದಿ(ﷺ)ರವರ ವಫಾತಿನ ನಂತರ ಈ ಉಮ್ಮತಿನ ಅತ್ಯುತ್ತಮರಾದ ಅಬೂಬಕರ್ ಸಿದ್ದೀಖ್(ﷺ)ರವರ ಬಳಿಗಾಗಲಿ ಅಥವಾ ಇನ್ನಿತರ ಸ್ವಹಾಬಿಗಳ ಬಳಿಗಾಗಲಿ ಬರ್ಕತ್ ಪಡೆಯಲಿಕ್ಕಾಗಿ ಮಕ್ಕಳನ್ನು ಕೊಂಡೊಯ್ಯುತ್ತಿರಲಿಲ್ಲ. ಎರಡನೆಯದಾಗಿ ಹೇಳಿದ ಉದ್ದೇಶದಿಂದಾದರೆ ಯಾವುದೇ ಪೋಷಕರಿಗೂ ಮಗು ಜನಿಸಿದ ದಿನ ತನ್ನ ಶಿಶುವಿಗೆ ತಹ್‌ನೀಖ್ ನೀಡಬಹುದು. (ಶೈಖ್ ಉಸೈಮಿನ್(ﷺ)ರವರ ರಿಯಾದ್‌ಸ್ವಾಲಿಹೀನ್‌ನ ವ್ಯಾಖ್ಯಾನವನ್ನು ನೋಡಿರಿ.)

### *4. ಹೆಸರಿಡುವುದು*

ಮಗುವಿಗೆ ಹೆಸರಿಡುವಾಗ ಇಸ್ಲಾಮಿನ ಅತ್ಯುತ್ತಮವಾದ ಹೆಸರನ್ನಿಡಲು ಗಮನಿಸಬೇಕು.ಪ್ರವಾದಿ(ﷺ)ರವರು ನುಡಿದರು:

«إِنَّ أَحَبَّ أَسْمَائِكُمْ إِلَى اللَّهِ عَبْدُ اللَّهِ وَعَبْدُ الرَّحْمَنِ ». – مسلم

**"ಖಂಡಿತ ನಿಮ್ಮ ಹೆಸರುಗಳಲ್ಲಿ ಅಲ್ಲಾಹನಿಗೆ ಅತ್ಯಂತ ಇಷ್ಟವಿರುವ ಹೆಸರುಗಳು: ಅಬ್ದುಲ್ಲಾಹ್ ಮತ್ತು ಅಬ್ದುರ್ರಹ್ಮಾನ್."(ಮುಸ್ಲಿಂ)**

ಹಾಗೆಯೇ ಅಲ್ಲಾಹನ ನಾಮದೊಂದಿಗೆ ಅಬ್ದ್(ದಾಸ) ಸೇರಿಸಿ ಹೆಸರಿಡುವುದು ಉತ್ತಮವಾಗಿದೆ. ಉದಾ: ಅಬ್ದುಲ್ಲತ್ವೀಫ್, ಅಬ್ದುಲ್ ಮಲಿಕ್, ಅಬ್ದುಸ್ಸಲಾಮ್ ಎಂಬಿತ್ಯಾದಿ. ಇಸ್ಲಾಮೇತರ ನಾಮಗಳು, ಗಂಡೋ–ಹೆಣ್ಣೋ ಎಂದು ಗುರುತಿಸಲಾಗದ ಹಾಗೂ ನೀಚವಾದ ಅರ್ಥಗಳಿರುವ ನಾಮಗಳನ್ನು ಉಪೇಕ್ಷಿಸಬೇಕು. ಮಗು ಜನಿಸಿದ ದಿನ ಅಥವಾ ಏಳನೆ ದಿನ ಹೆಸರಿಡುವುದರಲ್ಲಿ ಅಡ್ಡಿಯಿಲ್ಲ. ಪ್ರವಾದಿ(ﷺ)ರವರು ನುಡಿದರು:

«وُلِدَ لِيَ اللَّيْلَةَ غُلاَمٌ فَسَمَّيْتُهُ بِاسْمِ أَبِي إِبْرَاهِيمَ» – مسلم

**"ಈ ರಾತ್ರಿ ನನಗೊಂದು ಮಗು ಜನಿಸಿದೆ. ಆ ಮಗುವಿಗೆ ನನ್ನ ಪಿತರ ಹೆಸರಾದ ಇಬ್ರಾಹೀಂ ಎಂದು ನಾಮಕರಣ ಮಾಡಿದ್ದೇನೆ."(ಮುಸ್ಲಿಂ)**

### *5. ಅಖೀಖ ಕೊಡುವುದು ಮತ್ತು ಕೂದಲು ತೆಗೆಯುವುದು*

ಮಗು ಜನಿಸಿ ಏಳರಂದು ಮೃಗ ಬಲಿ ಕೊಡುವುದಕ್ಕೆ ಅಖೀಖ ಎನ್ನಲಾಗುವುದು. ಬಲಿ ಕೊಡುವಾಗ ನ್ಯೂನತೆಗಳಿಲ್ಲದ ಆಡನ್ನು ದಿಬ್ಹ ಮಾಡಬೇಕು. ಮಗು ಗಂಡಾದರೆ ಎರಡು ಆಡು ಮತ್ತು ಮಗು ಹೆಣ್ಣಾದರೆ ಒಂದು ಆಡನ್ನು ದಿಬ್ಹ ಮಾಡಬೇಕು. ದಿಬ್ಹ ಮಾಡಲಾದ ಆಡಿನ ಮಾಂಸವನ್ನು ನೆರೆ ಮನೆಯವರಿಗೂ, ಬಡ ಬಗ್ಗರಿಗೂ ವಿತರಿಸಬಹುದು ಹಾಗೂ ಸ್ವಂತಕ್ಕೂ ಉಪಯೋಗಿಸಬಹುದು. ಮಾಂಸವನ್ನು ವಿತರಣೆ ಮಾಡುವುದರಲ್ಲಿ ಅಥವಾ ಅದರಿಂದ ಸತ್ಕಾರ ಏರ್ಪಡಿಸುವುದರಲ್ಲಿ ದೋಷವಿಲ್ಲ. ಪ್ರವಾದಿ(ﷺ)ರವರು ನುಡಿದರು:

«كُلُّ غُلاَمٍ رَهِينٌ بِعَقِيقَتِهِ تُذْبَحُ عَنْهُ يَوْمَ سَابِعِهِ ، وَيُحْلَقُ رَأْسُهُ وَيُسَمَّى» –أحمد صحيح

**"ಪ್ರತಿಯೊಂದು ಮಗು, ಜನಿಸಿದ ಏಳನೇ ದಿನ ಅವನಿಗಾಗಿ ಬಲಿ ಕೊಡುವ ಅಖೀಖದೊಂದಿಗೆ ಅವಲಂಭಿತವಾಗಿರುತ್ತದೆ. ಅವನ ಕೂದಲನ್ನು ಬೋಳಿಸಬೇಕು ಮತ್ತು ಹೆಸರಿಡಬೇಕು."(ಅಹ್ಮದ್)**

ಪ್ರವಾದಿ(ﷺ)ರವರು ನುಡಿದರು: **«مَعَ الْغُلاَمِ عَقِيقَةٌ فَأَهْرِيقُوا عَنْهُ دَمًا وَأَمِيطُوا عَنْهُ الأَذَى» –بخاري**

**"ಮಗು ಜನಿಸಿದರೆ ಅಖೀಖ ಕೊಡಬೇಕು, ತೊಂದರೆಯುಂಟು ಮಾಡುವುದನ್ನು(ಕೂದಲು, ಮುಂಜಿ ಮೊದಲಾದವುಗಳು) ನೀಗಿಸಬೇಕು."(ಬುಖಾರಿ)**

**«عَنِ الْغُلاَمِ شَاتَانِ مُكَافِئَتَانِ وَعَنِ الْجَارِيَةِ شَاةٌ» – أبو داوود صحيح**

**"ಗಂಡು ಮಗುವಿಗೆ (ಪ್ರಾಯದಲ್ಲೂ ಚಂದದಲ್ಲೂ) ಸರಿಸಮಾನವಾದ ಎರಡು ಆಡನ್ನು ಮತ್ತು ಹೆಣ್ಣು ಮಗುವಿಗೆ ಒಂದು ಆಡನ್ನು ಬಲಿ ಕೊಡಬೇಕು"(ಅಬೂದಾವೂದ್)**

ಇಬ್ನ್ ಅಬ್ಬಾಸ್(ರ)ರವರಿಂದ ವರದಿ: ಅವರು ಹೇಳುತ್ತಾರೆ:

**«عَقَّ رَسُولُ اللهِ صَلَّى اللَّهُ عَلَيْهِ وَسَلَّمَ عَنِ الْحَسَنِ ، وَالْحُسَيْنِ بِكَبْشَيْنِ كَبْشَيْنِ» –نسائي صحيح**

**"ಪ್ರವಾದಿ(ﷺ)ರವರು ಹಸನ್ ಮತ್ತು ಹುಸೈನ್(ರ)ರಿಗೆ ಎರಡು ಆಡಿನಂತೆ ಅಖೀಖ ಕೊಟ್ಟರು"(ನಸಾಈ)**

ಪ್ರವಾದಿ(ﷺ)ರವರು ನುಡಿದರು:

**«أَنَّ النَّبِيَّ صَلَّى اللَّهُ عَلَيْهِ وَسَلَّمَ أَمَرَ بِتَسْمِيَةِ الْمَوْلُودِ يَوْمَ سَابِعِهِ وَوَضْعِ الأَذَى عَنْهُ وَالعَقِّ» –ترمذي – حسن**

**"ಮಗುವಿಗೆ ಏಳನೆ ದಿನ ಹೆಸರಿಡಲೂ, ಉಪದ್ರವವನ್ನು ನೀಗಿಸಲೂ ಮತ್ತು ಅಖೀಖ ಕೊಡಲೂ ಪ್ರವಾದಿ(ﷺ)ರವರು ಅದೇಶಿಸಿದರು"(ತಿರ್ಮಿದಿ)**

ಅಬೂಬುರ್ದ(ರ)ರವರು ಹೇಳುತ್ತಾರೆ:

**«كُنَّا فِي الْجَاهِلِيَّةِ إِذَا وُلِدَ لأَحَدِنَا غُلاَمٌ ذَبَحَ شَاةً وَلَطَخَ رَأْسَهُ بِدَمِهَا فَلَمَّا جَاءَ اللَّهُ بِالإِسْلاَمِ كُنَّا نَذْبَحُ شَاةً وَنَحْلِقُ رَأْسَهُ وَنَلْطَخُهُ بِزَعْفَرَانٍ» – أبو داوود – حسن صحيح**

**"ಜಾಹಿಲಿಯ್ಯಾ ಕಾಲದಲ್ಲಿ ನಮ್ಮಲ್ಲೊಬ್ಬರಿಗೆ ಮಗು ಜನಿಸಿದರೆ ಒಂದು ಆಡನ್ನು ಬಲಿ ಕೊಟ್ಟು ಅದರ ರಕ್ತವನ್ನು (ಮಗುವಿನ) ತಲೆಗೆ ಹಚ್ಚುತ್ತಿದ್ದೆವು. ಆದರೆ ಅಲ್ಲಾಹನು ಇಸ್ಲಾಮ್ ಧರ್ಮವನ್ನು ತಂದಾಗ ನಾವು ಆಡನ್ನು ದಿಬ್ಹ ಮಾಡಿ, ತಲೆ ಬೋಳಿಸಿ ಕುಂಕುಮವನ್ನು ಹಚ್ಚಿದೆವು"(ಅಬೂದಾವೂದ್)**

***ಕೂದಲು ನೀಗಿಸುವಾಗ ಗಮನಿಸಬೇಕಾದ ಅಂಶ***

ಇಬ್ನ್ ಉಮರ್(ರ)ರವರಿಂದ ವರದಿ, ಅವರು ಹೇಳಿದರು:

**«أَنَّ رَسُولَ اللهِ صلى الله عليه وسلم نَهَى عَنِ الْقَزَعِ» –بخاري** **"ಪ್ರವಾದಿ(ﷺ)ರವರು ಖಝುಅನ್ನು ವಿರೋಧಿಸಿದರು."(ಬುಖಾರಿ)**

ತಲೆ ಬೋಳಿಸುವಾಗ ಸ್ವಲ್ಪ ಭಾಗವನ್ನು ಮಾತ್ರ ಬೋಳಿಸಿ ಉಳಿದ ಭಾಗವನ್ನು ಬೋಳಿಸದೆ ಉಪೇಕ್ಷಿಸುವುದಕ್ಕೆ 'ಖಝುಅ್' ಎನ್ನಲಾಗುವುದು.

***೬. ಮುಂಜಿ ಮಾಡುವುದು***

ಮುಂಜಿ ಮಾಡುವುದು ಪ್ರವಾದಿಗಳ ಚರ್ಯೆಯಾಗಿದೆ. ಮಗು ಜನಿಸಿ ಏಳರಂದೇ ಮುಂಜಿ ಮಾಡಬೇಕೆಂಬುವುದಕ್ಕೆ ಆಧಾರಗಳಿಲ್ಲ. ಅದರ ಮುಂಚೆ ಅಥವಾ ನಂತರ ಮಾಡಬಹುದಾಗಿದೆ. ಪ್ರವಾದಿ(ﷺ)ರವರು ನುಡಿದರು:

**«الْفِطْرَةُ خَمْسٌ الْخِتَانُ وَالِاسْتِحْدَادُ وَنَتْفُ الإِبْطِ وَقَصُّ الشَّارِبِ وَتَقْلِيمُ الأَظْفَارِ»– بخاري**

**"ಐದು ಕರ್ಮಗಳು ಫಿತ್ರತಿನಲ್ಲಿ(ಪ್ರಕೃತಿಯಲ್ಲಿ) ಒಳಪಟ್ಟಿವೆ. ಮುಂಜಿ, ಗುಪ್ತಾಂಗದ ಕೂದಲು ನೀಗಿಸುವುದು, ಮೀಸೆ ಮತ್ತು ಉಗುರು ಕತ್ತರಿಸುವುದು, ಕಂಕುಳದ ರೋಮವನ್ನು ನೀಗಿಸುವುದು"(ಬುಖಾರಿ)**

ಪ್ರವಾದಿ(ﷺ)ರವರು ನುಡಿದರು: **«اخْتَتَنَ إِبْرَاهِيمُ – عَلَيْهِ السَّلاَمُ ، وَهْوَ ابْنُ ثَمَانِينَ سَنَةً بِالْقَدُّومِ»– بخاري**

**"ಇಬ್ರಾಹೀಂ(ﷺ)ರವರು ಅವರ 80ನೇ ವಯಸ್ಸಿನಲ್ಲಿ ಖದ್ದೂಮ್ ಎಂಬ ವಸ್ತುವಿನಿಂದ ಮುಂಜಿ ಮಾಡಿದರು"(ಬುಖಾರಿ)**

## 7. ಮಕ್ಕಳ ಮೂತ್ರ

ಸ್ತನಪಾನ ಮಾಡುತ್ತಿರುವ ಗಂಡು ಮಗುವಿನ ಮೂತ್ರವನ್ನು ಶುದ್ಧೀಕರಿಸಲು ನೀರನ್ನು ಎರಚಿದರೆ ಸಾಕು. ಆದರೆ ಹೆಣ್ಣು ಮಗುವಿನ ಮೂತ್ರವನ್ನು ತೊಳೆದು ಶುದ್ಧೀಕರಿಸಬೇಕು. ಲುಬಾಬ ಬಿನ್ತಿಲ್ ಹಾರಿಥ್ ಹೇಳುತ್ತಾರೆ:

«بَالَ الْحُسَيْنُ بْنُ عَلِيٍّ فِي حِجْرِ النَّبِيِّ صَلَّى اللهُ عَلَيْهِ وسَلَّمَ ، فَقُلْتُ : يَا رَسُولَ اللهِ ، أَعْطِنِي ثَوْبَكَ ، وَالْبَسْ ثَوْبًا غَيْرَهُ ، فَقَالَ : إِنَّمَا يُنْضَحُ مِنْ بَوْلِ الذَّكَرِ ، وَيُغْسَلُ مِنْ بَوْلِ الْأُنْثَى» –ابن ماجه

**"ಹುಸೈನ್ ಇಬ್ನ್ ಅಲೀ(ﷺ)ರವರು ಪ್ರವಾದಿ(ﷺ)ರವರ ಮೇಲೆ ಮೂತ್ರ ವಿಸರ್ಜನೆ ಮಾಡಿದರು. ಆಗ ನಾನು ಹೇಳಿದೆ. ರಸೂಲರೇ, ತಾವು ತಮ್ಮ ಬಟ್ಟೆಯನ್ನು ಕಳಚಿ ನನಗೆ ಕೊಟ್ಟು ಬೇರೊಂದು ಬಟ್ಟೆಯನ್ನು ಧರಿಸಿರಿ. ಆಗ ಪ್ರವಾದಿ(ﷺ)ರವರು ಹೇಳಿದರು: ಖಂಡಿತ ಗಂಡು ಮಗುವಿನ ಮೂತ್ರದ ಮೇಲೆ (ಶುದ್ಧೀಕರಿಸಲು) ನೀರು ಎರಚಿದರೆ ಸಾಕಾಗುವುದು, ಹೆಣ್ಣು ಮಗುವಿನ ಮೂತ್ರವನ್ನು(ಶುದ್ಧೀಕರಿಸಲು) ತೊಳೆಯಬೇಕು."(ಇಬ್ನ್ ಮಾಜಃ)**

«أُتِيَ النَّبِيُّ صلى الله عليه وسلم بِصَبِيٍّ يُحَنِّكُهُ فَبَالَ عَلَيْهِ فَأَتْبَعَهُ الْمَاءَ» – بخاري

**"ಪ್ರವಾದಿ(ﷺ)ರವರ ಬಳಿಗೆ ತಹ್ನೀಕ್‌ಗಾಗಿ (ಸಿಹಿ ಹಾಕಲಿಕ್ಕಾಗಿ) ಒಂದು ಮಗುವನ್ನು ಕರೆ ತರಲಾಯಿತು. ಆಗ ಆ ಮಗು ಪ್ರವಾದಿ(ﷺ)ರವರ ಮೇಲೆ ಮಾತ್ರ ವಿಸರ್ಜನೆ ಮಾಡಿತು. ಆಗ ಆ ಸ್ಥಳಕ್ಕೆ ನೀರು ಹಾಕಲಾಯಿತು."(ಬುಖಾರಿ)**

## 8. ಪೋಷಕರ ಗಮನಕ್ಕೆ

- ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಮಾರ್ಗದರ್ಶನ ನೀಡಿರಿ, ಅವರ ಕಿರಿಯ ಪ್ರಾಯದಲ್ಲೇ ಅವರ ಮನಸ್ಸಿನಲ್ಲಿ ಇಸ್ಲಾಮಿನ ಮಹತ್ವವನ್ನು ಬೇರೂರಬೇಕು.
- ನೀವು ಮಕ್ಕಳಿಗೆ ಮಾದರಿಯಾಗಿರಿ, ಕಾರಣ ನಿಮ್ಮನ್ನು ಹಿಂಬಾಲಿಸುತ್ತಾ ಅವರ ಜೀವನ ಮುಂದೆ ಸಾಗುತ್ತಿದೆ.
- ನೀವೂ ಒಬ್ಬ ಪಾಲಕರಾಗಿದ್ದೀರಿ. ಮಾತಾ–ಪಿತರಿಗಿರುವ ಬಾಧ್ಯತೆಯ ಪ್ರಾಮುಖ್ಯತೆಯನ್ನು ಇದೀಗ ನೀವು ತಿಳಿದಿದ್ದೀರಿ. ಆದುದರಿಂದ ಬಾಕಿಯುಳಿದಿರುವ ಪ್ರಾಯವನ್ನು ಮಾತಾ–ಪಿತರಿಗಾಗಿ ಪುಣ್ಯ ಮಾಡಲು ಮತ್ತು ಅವರೊಂದಿಗೆ ಸದ್ಗುಣವಂತರಾಗಿ ನಡೆಯಲು ವ್ಯಯಿಸಿರಿ.
- ನಿಮ್ಮ ಕೂದಲುಗಳ ಮಧ್ಯೆದಿಂದ ಹಣ್ಣಾದ ಕೂದಲುಗಳು ಗೋಚರವಾಗಲು ತೊಡಗಿರಬಹುದು. ಪ್ರಾಯವು ಮುಗಿಯಲಾಗಿದೆ ಹಾಗೂ ಮುಂದಿನ ಜೀವನದೆಡೆಗಿರುವ ದಿನಗಳು ಎಣಿಸಲ್ಪಟ್ಟಿವೆ ಎಂಬುದನ್ನು ಅದು ಸೂಚಿಸುತ್ತದೆ. ಆದುದರಿಂದ ಬಾಕಿಯುಳಿದಿರುವ ಪ್ರಾಯದಲ್ಲಿ ಅಲ್ಲಾಹನಿಗೆ ಶರಣಾಗಿ ಜೀವಿಸಿರಿ.
- ಮಕ್ಕಳಿಗೆ ಧರ್ಮಸಮ್ಮತವಲ್ಲದವುಗಳನ್ನು ತಿನ್ನಿಸುವುದರಿಂದಲೂ ತೋರಿಸುವುದರಿಂದಲೂ ಜಾಗ್ರತೆ ವಹಿಸಿರಿ.
- ಸ್ವಂತಕ್ಕಾಗಿಯೂ ಮಕ್ಕಳಿಗಾಗಿಯೂ ಅತ್ಯಧಿಕ ಪ್ರಾರ್ಥಿಸಿರಿ. ಅದು ಅಂಬಿಯಾಗಳ ಮತ್ತು ಸ್ವಾಲಿಹೀನ್‌ಗಳ ಚರ್ಯೆಯಾಗಿದೆ.
- ನಿಮ್ಮ ಮಕ್ಕಳು ಉತ್ತಮರಾದರೆ ನೀವು ದ್ವಿಲೋಕದಲ್ಲೂ ಯಶಸ್ಸನ್ನು ಕಾಣುವಿರಿ. ಆದುದರಿಂದ ಅವರಿಗಾಗಿ ಉತ್ತಮ ಸಂಗಾತಿಯನ್ನು ಆರಿಸಿರಿ. ನೀಚ ಸಂಗಾತಿಗಳಿಂದ ದೂರ ನಿಲ್ಲಿಸಿರಿ. ನಮ್ಮೆಲ್ಲರ ಮನೆಗಳು ಕೆಡುಕುಗಳಿಂದಲೂ ಕ್ಷೋಭೆಗಳಿಂದಲೂ ಮುಕ್ತವಾಗಿರಲಿ. ಆಮೀನ್.

✍ ಮುಹಮ್ಮದ್ ಸಾದಿಖ್ ಮದೀನಿ–ದಮ್ಮಾಮ್ | ಅನುವಾದ: ಅಬೂ ಬಿಲಾಲ್ ಎಸ್.ಎಮ್

وصلى الله وسلم على نبينا محمد وعلى آله وصحبه أجمعين

ಪ್ರಕಟಣೆ: ಕರ್ನಾಟಕ ಸಲಫಿ ಅಸೋಸಿಯೇಷನ್ ದಮ್ಮಾಮ್–ಖೋಬರ್ ಘಟಕ
Cont: 03 8980984, 0567388901, 0506739851 Email: info@salafiksa.org,
Web: www.salafiksa.org